# GRANT OF SANTION FOR PROSECUTION

| Sl. No | Date | Type | File No | Subject |
|---|---|---|---|---|
| 1. | 28.3.1988 | Official Memorandum | DPAR 16 SDE 88 | Sanction for prosecution of Government servants instructions - reg. |
| 2. | 10.7.1990 | Official Memorandum | DPAR 18 SDE 90 | Sanction for prosecution of Government servants instructions regarding. |
| 3. | 16.07.1998 | Official Memorandum | ಡಿಪಿಎಆರ್ 02 ಸೇಇವಿ 98, | ಸರ್ಕಾರಿ ನೌಕರನ ಮೇಲೆ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸಲು ಮಂಜೂರಾತಿ ನೀಡುವ ಬಗ್ಗೆ- ಮರು ಸೂಚನೆಗಳು |
| 4. | 24.03.2001 | Official Memorandum | ಡಿಪಿಎಆರ್ 03 ಸೇಇವಿ 2001 | ಸರ್ಕಾರಿ ನೌಕರನ ಮೇಲೆ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸಲು ಮಂಜೂರಾತಿ ನೀಡುವ ಬಗ್ಗೆ |
| 5. | 24.08.2001 | Circular | ಡಿಪಿಎಆರ್ 31 ಸೇಇವಿ 2001 | ಸರ್ಕಾರಿ ನೌಕರನ ವಿರುದ್ಧ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸಲು ಮಂಜೂರಾತಿ ನೀಡಲು ಅಧಿಕಾರ ಹೊಂದಿರುವ ಪ್ರಾಧಿಕಾರಗಳು ಮಂಜೂರಾತಿ ಆದೇಶಗಳನ್ನು ಸಮರ್ಪಕವಾಗಿ ಹೊರಡಿಸುವಂತಿಲ್ಲವೆಂಬ ಬಗ್ಗೆ- ಮರು ಸೂಚನೆಗಳು |
| 6. | 26-09-2011 | Circular | ಸಿಆಸುಇ 43 ಸೇಇವಿ 2011 | ಸರ್ಕಾರಿ ನೌಕರರ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲು ಅಧಿಕಾರ ಹೊಂದಿರುವ ಪ್ರಾಧಿಕಾರಗಳು ಕಾಲಮಿತಿ ಅನುಸರಿಸುವ ಬಗ್ಗೆ |
| 7. | 28.07.2015 | Circular | ಸಿಆಸುಇ 50 ಸೇಇವಿ 2015, | ಸರ್ಕಾರಿ ನೌಕರರ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲು ಅಧಿಕಾರ ಹೊಂದಿರುವ ಪ್ರಾಧಿಕಾರಗಳು ಕಾಲಮಿತಿ ಅನುಸರಿಸುವ ಬಗ್ಗೆ |

# GOVERNMENT OF KARNATAKA

No.DPAR 16 SDE 88

Karnataka Government Secretariat,
Vidhana Soudha,
Bangalore, dated 28th March 1988.

**OFFICIAL MEMORANDUM**

**Sub:** Sanction for prosecution of Government servants-instructions regarding.

******

According to Section 6 of the Prevention of Corruption Act or Section 197 of the Code of Criminal Procedure, sanction of the authority competent to remove a Government servant from service is necessary for prosecuting a Government servant who is accused of any offence alleged to have been committed by him while discharging his official duties.

2. Before according sanction for the prosecution of a Government servant, the competent authority has to satisfy itself that there is a prima facie case against the concerned Government servant necessitating his prosecution in a court of law and that such a competent authority has applied its mind to the material placed before it.

3. The above facts should be reflected in the order sanctioning prosecution as a speaking order.

4. All the appointing authorities are requested to bear in mind the above instructions and ensure that only speaking orders are issued in such cases.

sd/-
**M.M. Naik**
Additional Secretary to Government, Dept. of Personnel and Admnv. Reforms, (Service Rules).

**GOVERNMENT OF KARNATAKA**

No.DPAR 18 SDE 90

Karnataka Government Secretariat,
Vidhana Soudha
Bangalore, dated: 10th July 1990.

# OFFICIAL MEMORANDUM

**Sub:** Sanction for prosecution of Government servants-instructions regarding.

**Ref:** O.M. No. DPAR 16 SDE 88 dated 28.3.88.

*******

In Official Memorandum dated 28.3.1988 referred to above, certain instructions regarding sanction for prosecution of Government servants were issued. Now the Prevention of Corruption Act, 1947 has been repealed by the Prevention of Corruption Act, 1988. Section 19 of the said Act provides for obtaining prior sanction of the Competent authority before prosecuting a Government servant.

Rest of the instructions contained in the O.M. referred to above are reiterated.

All the Appointing authorities are requested to bear in mind the above instructions while according sanction for the prosecution of a Government servant.

sd/-
**K.K. Nadgir**
Under Secretary to Government
Dept. of Personnel & Admn. Reforms,
(Service Rules).

## ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 02 ಸೇಇವಿ 98

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ: 16.07.98

## ಅಧಿಕೃತ ಜ್ಞಾಪನ

**ವಿಷಯ:** ಸರ್ಕಾರಿ ನೌಕರರ ಮೇಲೆ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸಲು ಮಂಜೂರಾತಿ ನೀಡುವ ಬಗೆಗೆ ಮರು ಸೂಚನೆಗಳು.

**ಉಲ್ಲೇಖ:**
1. ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 16 ಎಸ್‌ಡಿಇ 88, ದಿನಾಂಕ: 28.03.88.
2. ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 18 ಎಸ್‌ಡಿಇ 90, ದಿನಾಂಕ: 10.07.90.

*****

ಮೇಲೆ ಉಲ್ಲೇಖಿಸಿದ, ಕ್ರಮ ಸಂಖ್ಯೆ (1) ಮತ್ತು (2)ರಲ್ಲಿನ ಅಧಿಕೃತ ಜ್ಞಾಪನಗಳಲ್ಲಿ, ಸರ್ಕಾರಿ ನೌಕರರ ವಿರುದ್ಧ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸಲು ಭ್ರಷ್ಟಾಚಾರ ನಿರೋಧ ಅಧಿನಿಯಮ, 1947ರ ಪ್ರಕರಣ 6 ಮತ್ತು ದಂಡ ಪ್ರಕ್ರಿಯಾ ಸಂಹಿತೆ 1973ರ ಪ್ರಕರಣ 197ರ ಪ್ರಕಾರ, ಅನುಸರಿಸಬೇಕಾದ ಕ್ರಮದ ಬಗ್ಗೆ ಮಾರ್ಗಸೂಚನೆಗಳನ್ನು ನೀಡಲಾಗಿದೆ.

2. ಮೇಲ್ಕಂಡ ಅಧಿಕೃತ ಜ್ಞಾಪನಗಳನ್ನು ಹಿಂತೆಗೆದುಕೊಂಡು ಈ ಕೆಳಕಂಡ ಸೂಚನೆಗಳನ್ನು ನೀಡಿದೆ.

3. ಸರ್ವೋನ್ನತ ನ್ಯಾಯಾಲಯವು ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆಗಳು:340-343:93 ವಿನೀತ್ ನಾರಾಯಣ್ ಮತ್ತು ಇತರರ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು (1997 (10) ಸುಪ್ರೀಮ್ ಟುಡೆ-476) ಪ್ರಕರಣದಲ್ಲಿ ದಿನಾಂಕ: 18.02.97 ರಂದು ನೀಡಿದ ತೀರ್ಪಿನ ಉದ್ಧೃತ ಭಾಗವನ್ನು ಈ ಕೆಳಗೆ ನಮೂದಿಸಿದೆ:

> "Time limit of three months for grant of sanction for prosecution must be strictly adhered to. However, additional time of one month may be allowed where consultation is required with the Attorney general (A.G) or any other Law officer in the A.G's Office".

4. ಸರ್ಕಾರಿ ನೌಕರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಅನುಮತಿ ನೀಡುವ ಮುನ್ನ, ಸಕ್ಷಮ ಪ್ರಾಧಿಕಾರಿಯು ತನ್ನ ಮುಂದೆ ಮಂಡಿಸಲಾದ ದಾಖಲೆಗಳನ್ನು ಪರಿಶೀಲಿಸಿದ ನಂತರ, ಸರ್ಕಾರಿ ನೌಕರನ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಮೇಲ್ನೋಟಕ್ಕೆ ಸಾಕಷ್ಟು ಆಧಾರಗಳಿವೆ ಎಂದು ಮನದಟ್ಟು ಮಾಡಿಕೊಳ್ಳತಕ್ಕದ್ದು.

5. ಭ್ರಷ್ಟಾಚಾರ ನಿರೋಧ ಅಧಿನಿಯಮ, 1988ರ ಪ್ರಕರಣ 19ರನ್ವಯ ಯಾವ ಅಧಿಕಾರಿಯನ್ನು ಸರ್ಕಾರಿ ಅಥವಾ ಸರ್ಕಾರದ ಅನುಮೋದನೆಯೊಡನೆ ವಜಾ ಮಾಡಬಹುದೋ ಅಂಥ ಪ್ರಕರಣದಲ್ಲಿ ಸರ್ಕಾರದ ಹಂತದಲ್ಲಿ ಹಾಗೂ ಇನ್ನಿತರ ಯಾವುದೇ ವ್ಯಕ್ತಿಯನ್ನು ಯಾವ ಪ್ರಾಧಿಕಾರಿಯು ವಜಾ ಮಾಡಬಹುದೋ ಅಂಥ ಪ್ರಕರಣದಲ್ಲಿ ಆ ಪ್ರಾಧಿಕಾರಿ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 197ರನ್ವಯ, ಯಾವ ಅಧಿಕಾರಿಯನ್ನು ಸರ್ಕಾರ ಅಥವಾ ಸರ್ಕಾರದ ಅನುಮೋದನೆಯೊಡನೆ ವಜಾ ಮಾಡಬಹುದೋ ಅಂತಹ ಪ್ರಕರಣದಲ್ಲಿ, ಸರ್ಕಾರದ ಹಂತದಲ್ಲಿ ಮೇಲೆ ನಮೂದಿಸಿದ ಪ್ರಕರಣಗಳ ಪ್ರಕಾರ ಕ್ರಮವನ್ನು, ಮೇಲೆ ಕಾಣಿಸಿರುವ ಸರ್ವೋನ್ನತ ನ್ಯಾಯಾಲಯದ ತೀರ್ಪಿನಲ್ಲಿ ವ್ಯಕ್ತಪಡಿಸಿರುವ ಕಾಲಮಿತಿಗಳಲ್ಲಿ ಪೂರೈಸಿ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಅದನ್ನು ಉಲ್ಲಂಘಿಸತಕ್ಕದಲ್ಲ ಎನ್ನುವುದನ್ನು ಮೇಲೆ ನಮೂದಿಸಿದ ಪ್ರಕರಣಗಳಡಿಯಲ್ಲಿ ಕ್ರಮ ಜರುಗಿಸಲು ಅಧಿಕಾರಿ ಹೊಂದಿರುವ ಪ್ರಾಧಿಕಾರಗಳು ಸ್ಪಷ್ಟವಾಗಿ ಗಮನಿಸಬೇಕಾಗಿದೆ.

6. ಸರ್ವೋನ್ನತ ನ್ಯಾಯಾಲಯವು, ಮೇಲೆ ಉದ್ಧರಿಸಿದ ತೀರ್ಪಿನಲ್ಲಿ ನೀಡಿದ ನಿರ್ದೇಶನವನ್ನು ಕಟ್ಟುನಿಟ್ಟಾಗಿ ಪಾಲಿಸಲು, ಭ್ರಷ್ಟಾಚಾರ ನಿರೋಧ ಅಧಿನಿಯಮ, 1988ರ ಪ್ರಕರಣ 19 ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 197ರಡಿಯಲ್ಲಿ ಕ್ರಮ ಜರುಗಿಸಲು ಅಧಿಕಾರ ಹೊಂದಿರುವ ಪ್ರಾಧಿಕಾರಿಗಳು (Authorities vested with the power to sanction prosecution) ಇವರ ಗಮನಕ್ಕೆ ಪಾಲನೆಗಾಗಿ ತರಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು: ಕಾರ್ಯದರ್ಶಿಗಳನ್ನು ಕೋರಿದೆ.

**ಸಹಿ/-**
**ಕೆ.ಎಲ್.ಜಯರಾಮ್,**
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು)

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 3 ಸೇಇವಿ 2000

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 24.3.2001

**ಅಧಿಕೃತ ಜ್ಞಾಪನ**

**ವಿಷಯ:** ಸರ್ಕಾರಿ ನೌಕರರ ಮೇಲೆ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸಲು ಮಂಜೂರಾತಿ ನೀಡುವ ಬಗ್ಗೆ.

**ಉಲ್ಲೇಖ:** ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 2 ಸೇಇವಿ 98, ದಿನಾಂಕ: 16.7.98.

ಭ್ರಷ್ಟಾಚಾರ ನಿರೋಧ ಅಧಿನಿಯಮ, 1988ರ ಪ್ರಕರಣ 19 ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 197ರಡಿಯಲ್ಲಿ ಕ್ರಮ ಜರುಗಿಸಲು ಅಧಿಕಾರ ಹೊಂದಿರುವ ಪ್ರಾಧಿಕಾರಗಳು, ಸರ್ಕಾರಿ ನೌಕರರ ವಿರುದ್ಧ ಮೊಕದ್ದಮೆ ಹೂಡುವುದಕ್ಕೆ ಅನುಮತಿ ನೀಡುವ ಮುನ್ನ ತನ್ನ ಮುಂದೆ ಮಂಡಿಸಲಾದ ದಾಖಲೆಗಳನ್ನು ಪರಿಶೀಲಿಸಿದ ನಂತರ ನೌಕರನ ವಿರುದ್ಧ ಮೊಕದ್ದಮೆ ಹೂಡಲು ಮೇಲ್ನೋಟಕ್ಕೆ ಸಾಕಷ್ಟು ಆಧಾರಗಳಿವೆಯೇ ಎಂದು ಪರಿಶೀಲಿಸಿ, ಅಂತಹ ಅನುಮತಿ ನೀಡುವ ಬಗ್ಗೆ ತೀರ್ಮಾನಿಸಬೇಕೆಂದು, ಮೇಲೆ ಉಲ್ಲೇಖಿಸಿದ ಅಧಿಕೃತ ಜ್ಞಾಪನದಲ್ಲಿ ತಿಳಿಸಲಾಗಿದೆ.

2. ಮೇಲೆ ತಿಳಿಸಿದ ಸೂಚನೆಗಳಂತೆ ಸರ್ಕಾರಿ ನೌಕರನ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಸಕ್ಷಮ ಪ್ರಾಧಿಕಾರದ ಅನುಮತಿ ಕೋರುವ ಸಂದರ್ಭದಲ್ಲಿ ತನಿಖೆಗೆ ಸಂಬಂಧಿಸಿದ ದಾಖಲೆಗಳು, ದಸ್ತಾವೇಜುಗಳ ಪ್ರತಿಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

3. ಆದುದರಿಂದ, ಪೊಲೀಸ್ ವಿಭಾಗ, ಲೋಕಾಯುಕ್ತ ಹಾಗೂ ಸಿಒಡಿ, ಇತ್ಯಾದಿಗಳು ಸರ್ಕಾರಿ ನೌಕರರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಸಕ್ಷಮ ಪ್ರಾಧಿಕಾರದ ಅನುಮೋದನೆ ಕೋರುವ ಸಂದರ್ಭದಲ್ಲಿ ತನಿಖೆಗೆ ಸಂಬಂಧಿಸಿದ ದಾಖಲೆಗಳು, ದಸ್ತಾವೇಜುಗಳ ಪ್ರತಿಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಬೇಕೆಂದು ಮತ್ತೊಮ್ಮೆ ಸೂಚಿಸಲಾಗಿದೆ.

4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಒಳಾಡಳಿತ ಮತ್ತು ಸಾರಿಗೆ ಇಲಾಖೆ, ಇವರು ಸದರಿ ಸೂಚನೆಗಳನ್ನು ಅವರ ಆಡಳಿತ ವ್ಯಾಪ್ತಿಯಲ್ಲಿ ಬರುವ ಸಂಬಂಧಿಸಿದ ಇಲಾಖೆ: ಸಂಸ್ಥೆಗಳಿಗೆ ಪಾಲನೆಗಾಗಿ ತಿಳಿಸಲು ಕೋರಿದೆ.

5. ಸರ್ಕಾರದ ಪ್ರಧಾನ ಕಾರ್ಯದರ್ಶಿ: ಕಾರ್ಯದರ್ಶಿಗಳು, ಸಂಬಂಧಿಸಿದ ಪ್ರಕರಣಗಳಲ್ಲಿ ಮೇಲೆ ಹೇಳಿದಂತೆ ದಾಖಲೆಗಳನ್ನು ಪಡೆದು, ಮೇಲಿನ ಕಂಡಿಕೆ-1ರಲ್ಲಿ ಹೇಳಿದಂತೆ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದೆ.

**ಕೆ. ಎಲ್, ಜಯರಾಮ್**
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು),

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 31 ಸೇಇವಿ 2001

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 24.08.2001

## ಸುತ್ತೋಲೆ

ವಿಷಯ: ಸರ್ಕಾರಿ ನೌಕರನ ವಿರುದ್ಧ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸಲು ಮಂಜೂರಾತಿ ನೀಡಲು ಅಧಿಕಾರ ಹೊಂದಿರುವ ಪ್ರಾಧಿಕಾರಗಳು ಮಂಜೂರಾತಿ ಆದೇಶಗಳನ್ನು ಸಮರ್ಪಕವಾಗಿ ಹೊರಡಿಸುತ್ತಿಲ್ಲವೆಂಬ ಬಗ್ಗೆ- ಮರುಸೂಚನೆಗಳು.

ಉಲ್ಲೇಖ: (1) ದಿನಾಂಕ: 16.7.98ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 2 ಸೇಇವಿ 98.
(2) ದಿನಾಂಕ: 24.3.2001ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 3 ಸೇಇವಿ 2001.

*****

1. ಭ್ರಷ್ಟಾಚಾರ ನಿರೋಧ ಅಧಿನಿಯಮ, 1988ರ ಪ್ರಕರಣ 19 ಮತ್ತು ದಂಡಪ್ರಕ್ರಿಯಾ ಸಂಹಿತೆಯ ಪ್ರಕರಣ 197ರ ಅಡಿಯಲ್ಲಿ ಕ್ರಮ ಜರುಗಿಸಲು ಅಧಿಕಾರ ಹೊಂದಿರುವ ಪ್ರಾಧಿಕಾರ, ಸರ್ಕಾರಿ ನೌಕರರ ವಿರುದ್ಧ ಮೊಕದ್ದಮೆ ಹೂಡುವುದಕ್ಕೆ ಅನುಮತಿ ನೀಡುವ ಮುನ್ನ ತನ್ನ ಮುಂದೆ ಮಂಡಿಸಲಾದ ದಾಖಲೆಗಳನ್ನು ಪರಿಶೀಲಿಸಿದ ನಂತರ, ನೌಕರನ ವಿರುದ್ಧ ಮೊಕದ್ದಮೆ ಹೂಡಲು ಮೇಲ್ನೋಟಕ್ಕೆ ಸಾಕಷ್ಟು ಆಧಾರಗಳಿವೆಯೇ ಎಂದು ಪರಿಶೀಲಿಸಿ, ಅಂತಹ ಅನುಮತಿ ನೀಡುವ ಬಗ್ಗೆ ತೀರ್ಮಾನಿಸಬೇಕೆಂದು, ದಿನಾಂಕ: 16.7.1998 ಮತ್ತು ದಿನಾಂಕ: 24.3.2001ರ ಅಧಿಕೃತ ಜ್ಞಾಪನದಲ್ಲಿ ಸೂಚನೆಗಳನ್ನು ನೀಡಲಾಗಿದೆ.

2. ಕರ್ನಾಟಕ ಉಚ್ಚ ನ್ಯಾಯಾಲಯವು ಕ್ರಿಮಿನಲ್ ಮೇಲ್ಮನವಿ ಸಂಖ್ಯೆ: 421:1996-ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ ವಿರುದ್ಧ ಎಂ.ನಂಜುಂಡ- ಈ ಪ್ರಕರಣದಲ್ಲಿ ದಿನಾಂಕ 14.9.2000 ದಂದು ನೀಡಿದ ತೀರ್ಪಿನ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ತೀರ್ಪು ಸ್ವಯಂ ವೇದ್ಯವಾಗಿದೆ.

3. ಮೇಲೆ ಉಲ್ಲೇಖಿಸಿದ ಆಸ್ಪದಗಳ ಅಡಿಯಲ್ಲಿ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಅನುಮತಿ ನೀಡುವ ಆದೇಶವನ್ನು ಹೊರಡಿಸುವ ಮೊದಲು ಸಕ್ಷಮ ಪ್ರಾಧಿಕಾರಗಳು ಮೇಲಿನ ಕಂಡಿಕೆ (1) ರಲ್ಲಿ ಉಲ್ಲೇಖಿಸಿದ ಸೂಚನೆಗಳನ್ನು ಪಾಲಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಅಂತಹ ಆದೇಶಗಳನ್ನು ದೋಷಪೂರಿತವಾಗಿ ಹೊರಡಿಸುವುದನ್ನು ತಪ್ಪಿಸಬೇಕೆಂದು ಈ ಮೂಲಕ ಸೂಚಿಸಿದೆ.

4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು: ಕಾರ್ಯದರ್ಶಿಗಳು: ಇಲಾಖಾ ಮುಖ್ಯಸ್ಥರು ಸದರಿ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು ಹಾಗೂ ಅದನ್ನು ಅವರವರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಕ್ಷಮ ಪ್ರಾಧಿಕಾರಗಳ ಗಮನಕ್ಕೆ ತರಬೇಕೆಂದು ಸೂಚಿಸಿದೆ.

**ಕೆ.ಎಲ್, ಜಯರಾಮ್**
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು),

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 43 ಸೇಇವಿ 2011

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ: 26-09-2011.

## ಸುತ್ತೋಲೆ

ವಿಷಯ: ಸರ್ಕಾರಿ ನೌಕರರ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲು ಅಧಿಕಾರ ಹೊಂದಿರುವ ಪ್ರಾಧಿಕಾರಗಳು ಕಾಲಮಿತಿ ಅನುಸರಿಸುವ ಬಗ್ಗೆ.

ಉಲ್ಲೇಖ;
1. ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 2 ಸೇಇವಿ 98, ದಿನಾಂಕ: 16-07-98
2. ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 3 ಸೇಇವಿ 2001, ದಿನಾಂಕ: 24-03-2001.
3. ಸುತ್ತೋಲೆ ಸಂಖ್ಯೆ: ಸಿಆಸುಇ 31 ಸೇಇವಿ 2001, ದಿನಾಂಕ: 24-08-2001.

ಸರ್ಕಾರಿ ನೌಕರರ ವಿರುದ್ಧ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸಲು ಭ್ರಷ್ಟಾಚಾರ ತಡೆ ಅಧಿನಿಯಮ 1988ರ ಪ್ರಕರಣ 19 ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 197ರಡಿಯಲ್ಲಿ ಕ್ರಮ ಜರುಗಿಸಲು ಅಧಿಕಾರ ಹೊಂದಿರುವ ಪ್ರಾಧಿಕಾರಗಳು ಸರ್ಕಾರಿ ನೌಕರರ ವಿರುದ್ಧ ಮೊಕದ್ದಮೆ ಹೂಡುವುದಕ್ಕೆ ಅಭಿಯೋಜನಾ ಮಂಜೂರಾತಿ ನೀಡುವ ಮುನ್ನ ತಮ್ಮ ಮುಂದೆ ಮಂಡಿಸಲಾದ ದಾಖಲಗಳನ್ನು ಪರಿಶೀಲಿಸಿದ ನಂತರ ಅವರ ವಿರುದ್ಧ ಮೊಕದ್ದಮೆ ಹೂಡಲು ಮೇಲ್ನೋಟಕ್ಕೆ ಸಾಕಷ್ಟು ಆಧಾರಗಳಿವೆಯೇ ಎಂದು ಪರಿಶೀಲಿಸಿ ಮನದಟ್ಟು ಮಾಡಿಕೊಂಡ ನಂತರ ಅಭಿಯೋಜನಾ ಮಂಜೂರಾತಿಯನ್ನು ನೀಡುವ ಬಗ್ಗೆ ತೀರ್ಮಾನಿಸಲು ಉಲ್ಲೇಖದಲ್ಲಿ ತಿಳಿಸಿರುವ ಅಧಿಕೃತ ಜ್ಞಾಪನ/ಸುತ್ತೋಲೆಗಳಲ್ಲಿ ಸೂಚನೆಗಳನ್ನು ನೀಡಲಾಗಿದೆ. ಹಾಗೇಯೇ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ(ಕ್ರಿಮಿನಲ್) ಸಂಖ್ಯೆಗಳು: 340-343/92-ವಿನೀತ್ ನಾರಾಯಣ್ ಮತ್ತು ಇತರರ ವಿರುದ್ಧ ಮತ್ತು ಇತರ ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿ ವ್ಯಕ್ತಪಡಿಸಿರುವ ಕಾಲಮಿತಿಗಳಲ್ಲಿ(3 ತಿಂಗಳು ಮಾತ್ರ ಹಾಗೂ ಯಾವುದೇ ಕಾನೂನು ಅಧಿಕಾರಿಗಳನ್ನು ಸಂಪರ್ಕಿಸಬೇಕಾದಲ್ಲಿ ಮತ್ತೊಂದು ತಿಂಗಳ ಅವಧಿ ಮಾತ್ರ) ಅಭಿಯೋಜನಾ ಮಂಜೂರಾತಿಯನ್ನು ನೀಡುವ ಬಗ್ಗೆ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳತಕ್ಕದ್ದೆಂದು ದಿನಾಂಕ: 16-007-98ರ ಅಧಿಕೃತ ಜ್ಞಾಪನದಲ್ಲಿ (ಉಲ್ಲೇಖ1) ಸ್ಪಷ್ಟವಾದ ಸೂಚನೆಯನ್ನು ನೀಡಲಾಗಿದೆ. ಈ ಸೂಚನೆಯನ್ನು ವಿವಿಧ ಸಕ್ಷಮ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಪಾಲಿಸದಿರುವುದು ಹಾಗೂ ಕರ್ನಾಟಕ ಲೋಕಾಯುಕ್ತದ ಪೊಲೀಸ್ ವಿಭಾಗವು ಈವರೆಗೆ ಹಲವಾರು ಪ್ರಕರಣಗಳಲ್ಲಿ ಅಭಿಯೋಜನಾ ಮಂಜೂರಾತಿಯನ್ನು ನಿರೀಕ್ಷಿಸುತ್ತಿರುವ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮೇಲೆ ತಿಳಿಸಿರುವ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿಯನ್ನು ನೀಡುವ ಬಗ್ಗೆ ವಿಧಿಸಿರುವ 3 ತಿಂಗಳ ಕಾಲಮಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಭ್ರಷ್ಟಾಚಾರ ತಡೆ ಅಧಿನಿಯಮ 1988ರ ಪ್ರಕರಣ 19 ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 197ರಡಿಯಲ್ಲಿ ಕ್ರಮ ಜರುಗಿಸಲು ಅಧಿಕಾರ ಹೊಂದಿರುವ ಪ್ರಾಧಿಕಾರಗಳಿಗೆ ಮತ್ತೊಮ್ಮೆ ಸೂಚಿಸಲಾಗಿದೆ.

**(ಎಸ್.ವಿ.ರಂಗನಾಥ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ

# ಕರ್ನಾಟಕಸರ್ಕಾರ

ಸಂಖ್ಯೆ:ಸಿಆಸುಇ 50 ಸೇಇವಿ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು. ದಿನಾಂಕ: 28.07.2015

## ಸುತ್ತೋಲೆ

ವಿಷಯ: ಸರ್ಕಾರಿ ನೌಕರರ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡಲು ಅಧಿಕಾರ ಹೊಂದಿರುವ ಪ್ರಾಧಿಕಾರಗಳು ಕಾಲಮಿತಿ ಅನುಸರಿಸುವ ಬಗ್ಗೆ.

ಉಲ್ಲೇಖ:
1. ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 2 ಸೇಇವಿ 98, ದಿನಾಂಕ: 16.07.1998.
2. ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 3 ಸೇಇವಿ 2001, ದಿನಾಂಕ: 24.03.2001
3. ಸುತ್ತೋಲೆ ಸಂಖ್ಯೆ: ಸಿಆಸುಇ 31 ಸೇಇವಿ 2001, ದಿನಾಂಕ: 24.08.2001.
4. ಸುತ್ತೋಲೆ ಸಂಖ್ಯೆ: ಸಿಆಸುಇ 43 ಸೇಇವಿ 2011, ದಿನಾಂಕ: 26.09.2011.
5. ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 25 ಸೇಇವಿ 2015, ದಿನಾಂಕ: 17.07.2015.

*******

ಸರ್ಕಾರಿ ನೌಕರರ ವಿರುದ್ಧ ನ್ಯಾಯಾಲಯದಲ್ಲಿ ಕಾನೂನು ಕ್ರಮ ಜರುಗಿಸಲು ಭ್ರಷ್ಟಾಚಾರ ತಡೆ ಅಧಿನಿಯಮ 1988ರ ಪ್ರಕರಣ 19 ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 197ರಡಿಯಲ್ಲಿ ಕ್ರಮ ಜರುಗಿಸಲು ಅಧಿಕಾರ ಹೊಂದಿರುವ ಪ್ರಾಧಿಕಾರಗಳು ಸರ್ಕಾರಿ ನೌಕರರ ವಿರುದ್ಧ ಮೊಕದ್ದಮೆ ಹೂಡುವುದಕ್ಕೆ ಅಭಿಯೋಜನಾ ಮಂಜೂರಾತಿ ನೀಡುವ ಮುನ್ನ ತಮ್ಮ ಮುಂದೆ ಮಂಡಿಸಲಾದ ದಾಖಲೆಗಳನ್ನು ಪರಿಶೀಲಿಸಿದ ನಂತರ ಅವರ ವಿರುದ್ಧ ಮೊಕದ್ದಮೆ ಹೂಡಲು ಮೇಲ್ನೋಟಕ್ಕೆ ಸಾಕಷ್ಟು ಆಧಾರಗಳಿವೆಯೇ ಎಂದು ಪರಿಶೀಲಿಸಿ ಮನದಟ್ಟು ಮಾಡಿಕೊಂಡ ನಂತರ ಅಭಿಯೋಜನಾ ಮಂಜೂರಾತಿಯನ್ನು ನೀಡುವ ಬಗ್ಗೆ ತೀರ್ಮಾನಿಸಲು ಉಲ್ಲೇಖದಲ್ಲಿ ತಿಳಿಸಿರುವ ಅಧಿಕೃತ ಜ್ಞಾಪನ/ಸುತ್ತೋಲೆಗಳಲ್ಲಿ ಸೂಚನೆಗಳನ್ನು ನೀಡಲಾಗಿದೆ. ಹಾಗೆಯೇ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ (ಕ್ರಿಮಿನಲ್) ಸಂಖ್ಯೆಗಳು: 340/342/93- ವಿನೀತ್ ನಾರಾಯಣ ಮತ್ತು ಇತರರ ವಿರುದ್ಧ **Union of India**ಮತ್ತು ಇತರರ ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿ ವ್ಯಕ್ತಪಡಿಸಿರುವ ಕಾಲಮಿತಿಗಳಲ್ಲಿ (3 ತಿಂಗಳು ಮಾತ್ರ ಹಾಗೂ ಯಾವುದೇ ಕಾನೂನು ಅಧಿಕಾರಿಗಳನ್ನು ಸಂಪರ್ಕಿಸಬೇಕಾದಲ್ಲಿ ಮತ್ತೊಂದು ತಿಂಗಳ ಅವಧಿ ಮಾತ್ರ) ಅಭಿಯೋಜನಾ ಮಂಜೂರಾತಿಯನ್ನು ನೀಡುವ ಬಗ್ಗೆ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳತಕ್ಕದ್ದೆಂದು ದಿನಾಂಕ: 16.07.1998ರ ಅಧಿಕೃತ ಜ್ಞಾಪನದಲ್ಲಿ (ಉಲ್ಲೇಖ-1) ಸ್ಪಷ್ಟವಾದ ಸೂಚನೆಯನ್ನು ನೀಡಲಾಗಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮೇಲೆ ತಿಳಿಸಿರುವ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿಯನ್ನು ನೀಡುವ ಬಗ್ಗೆ ವಿಧಿಸಿರುವ 3 ತಿಂಗಳ ಕಾಲಮಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಭ್ರಷ್ಟಾಚಾರ ತಡೆ ಅಧಿನಿಯಮ 1988ರ ಪ್ರಕರಣ 19 ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ ಪ್ರಕರಣ 197 ರಡಿಯಲ್ಲಿ ಕ್ರಮ ಜರುಗಿಸಲು ಅಧಿಕಾರ ಹೊಂದಿರುವ ಪ್ರಾಧಿಕಾರಿಗಳಿಗೆ ಮತ್ತೊಮ್ಮೆ ಸೂಚಿಸಲಾಗಿದೆ.

ಸರ್ವೋಚ್ಚ ನ್ಯಾಯಾಲಯವು ಕ್ರಿಮಿನಲ್ ಮೇಲ್ಮನವಿ ಸಂಖ್ಯೆ: 1838/2013-ಸಿ.ಬಿ.ಐ ವಿರುದ್ಧ ಅಶೋಕ ಕುಮಾರ ಅಗರ್‌ವಾಲ್ ಪ್ರಕರಣದಲ್ಲಿ ನೀಡಿರುವ ತೀರ್ಪಿನ ಪ್ಯಾರ 8ರಲ್ಲಿ ಮಾಡಿರುವ ಅವಲೋಕನೆಯಂತೆ ಸಕ್ಷಮ ಪ್ರಾಧಿಕಾರಗಳು ಕ್ರಮ ಕೈಗೊಳ್ಳುವಂತೆ ಉಲ್ಲೇಖಿತ 5ರ ಅನಧಿಕೃತ ಟಿಪ್ಪಣಿಯಲ್ಲಿ ಕೋರಲಾಗಿದೆ.

ಇನ್ನು ಮುಂದೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಇಲಾಖೆಗಳ ನೌಕರರ ವಿರುದ್ಧ ಮೊಕದ್ದಮೆ ಹೂಡಲು ಅಭಿಯೋಜನಾ ಮಂಜೂರಾತಿ ನೀಡಲು ಬಾಕಿ ಇರುವ ಪ್ರಕರಣಗಳನ್ನು ಮೇಲ್ಕಂಡ ಮಾರ್ಗಸೂಚಿಗಳ ಹಿನ್ನೆಲೆಯಲ್ಲಿ ಪ್ರತಿ ತಿಂಗಳು ಪರಿಶೀಲಿಸಬೇಕೆಂದು ಸೂಚಿಸಿದೆ. ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ 3 ತಿಂಗಳಿಗೊಮ್ಮೆ ಪರಿಶೀಲಿಸಲಾಗುವುದೆಂದು ತಿಳಿಸಿದೆ.

(ಕೌಶಿಕ್ ಮುಖರ್ಜಿ)
ಸರ್ಕಾರದ ಮುಖ್ಯ ಕಾರ್ಯದರ್ಶಿ